



## ಅಂಧರ ಬಾಳಿನ ಬೆಳಕು

ಶ್ರೀ ರಾಮಚಂದ್ರ ಧೊಂಗಡೆ ಅವರು ಧಾರವಾಡದ ಜಯನಗರದಲ್ಲಿರುವ ಸಹನಾ ಅಂಗವಿಕಲರ ಸಹಾಯ ಸಂಸ್ಥೆಯಲ್ಲಿ ಸುಮಾರು 25 ವರ್ಷಗಳಿಂದ ಯಾವ ಪ್ರತಿಫಲವನ್ನೂ ಬಯಸದೇ ಅಂಧರ ಸೇವೆಯಲ್ಲಿ ತೊಡಗಿದ್ದಾರೆ. ಅಂಧರಿಗೆ ಬ್ರೈಲ್‌ಲಿಪಿಯಲ್ಲಿ ಓದುವುದು, ಬರೆಯುವುದು, ಟೈಪಿಂಗ್ ಇತ್ಯಾದಿಗಳನ್ನು ಕಲಿಸಿ ಸ್ವಾವಲಂಬಿಗಳಾಗಲು ನೆರವಾಗುತ್ತಿದ್ದಾರೆ. ಈ ಸಂಸ್ಥೆಗೆ ಅನುದಾನ ಮತ್ತು ಧನ ಸಹಾಯ ಇಲ್ಲ. ಯಾರಾದರೂ ದಾನಿಗಳು ಸ್ವಯಂ ಪ್ರೇರಿತರಾಗಿ ಹಣದ ರೂಪದಲ್ಲಿ ಅಥವಾ ಅಂಧರಿಗೆ ಅನುಕೂಲವಾಗುವ ವಸ್ತುಗಳ ರೂಪದಲ್ಲಿ ನೀಡುವ ಸಹಾಯದಿಂದ ಸಂಸ್ಥೆ ನಡೆಸುತ್ತಿದ್ದಾರೆ.

86ರ ಇಳಿ ವಯಸ್ಸಿನಲ್ಲಿಯೂ ಕೂಡಾ ಚಟುವಟಿಕೆಯಿಂದ ಕ್ರಿಯಾಶೀಲರಾಗಿದ್ದಾರೆ. ವರ್ಷಕ್ಕೊಂದು ಬಾರಿ ಉತ್ತರ ಕರ್ನಾಟಕದ ಎಲ್ಲ ಅಂಧರಿಗೆ ನೆರವಾಗುವ ಸಂಸ್ಥೆಗಳಿಂದ ವಿದ್ಯಾರ್ಥಿಗಳನ್ನು ಕರೆಯಿಸಿ ಬರೆಯುವುದು, ಓದುವುದು, ಭಾಷಣ ಸ್ಪರ್ಧೆ, ಸಂಗೀತ, ಕ್ವಿಜ್ ಇತ್ಯಾದಿ ಸ್ಪರ್ಧೆಗಳನ್ನು ಏರ್ಪಡಿಸಿ ಅಂಧರಿಗೆ ಉತ್ತೇಜನ ನೀಡುತ್ತಾರೆ. ಇತ್ತೀಚೆಗೆ ಕಲಬುರಗಿಯಲ್ಲಿ ನಡೆದ ಶರಣಸಾಹಿತ್ಯ ಪರಿಷತ್ ಸಮಾರಂಭದಲ್ಲಿ ಅಂಧ ವಿದ್ಯಾರ್ಥಿಗಳಿಂದಲೇ ಬ್ರೈಲ್ ಲಿಪಿಯಲ್ಲಿ ರಚಿಸಲ್ಪಟ್ಟ ಶರಣರ 108 ವಚನಗಳನ್ನು ಪರಿಷತ್ ಅಧ್ಯಕ್ಷರಾದ ಗೊ.ರು. ಚನ್ನಬಸಪ್ಪನವರಿಗೆ ಅರ್ಪಿಸಿ ಅಭಿನಂದನೀಯ ಕಾರ್ಯ ಮಾಡಿದ್ದಾರೆ.

**-ಪಂಪಾಪತಿ ಹಿರೇಮಠ, ಧಾರವಾಡ**

## ಇರುವೆ ಕಟ್ಟಿದ ಕೋಟೆ!

ಎತ್ತರ ಮರದ ಬುಡದಲ್ಲಿ ಮಲೆನಾಡಿನಲ್ಲಿ 'ಮೊಡಕ' ಎಂದು ಕರೆಯುವ ಇರುವೆಗಳು ಮರದ ಸುತ್ತಲೂ ಮಣ್ಣಿನ ರಾಶಿ ಹಾಕುವ ಪರಿ ಇದು. ಮಳೆಗಾಲ ಮುಗಿಯುತ್ತಿದ್ದಂತೆಯೇ ತಮ್ಮ ವಾಸಕ್ಕಾಗಿ ಮರದ ಬುಡ ಭಾಗದಲ್ಲಿ ಮಣ್ಣು ಸೇರಿಸಿ, ಕೋಟೆಯ ಹಾಗೆ ಶತ್ರುಗಳ ಕಣ್ಣಿಗೆ ಗೋಚರವಾಗದಂತೆ ಕಟ್ಟಿದ ಅಡಗು ತಾಣವಿದು.

ಚಿತ್ರ-ಬರಹ:
**ದತ್ತಾತ್ರೇಯ ಭಟ್ಟ ಕಣ್ಣೆಪಾಲ, ವಜ್ರಳ್ಳಿ**






## ಕಲ್ಲಂಗಡಿಯಲ್ಲಿ ಅರಳಿದ ನೃತ್ಯ

ಚಿತ್ರದುರ್ಗದಲ್ಲಿ ಜರುಗಿದ ಕಾರ್ಯಕ್ರಮ ಒಂದರಲ್ಲಿ ಕಲಾವಿದರೊಬ್ಬರು ಕಲ್ಲಂಗಡಿಯಲ್ಲಿ ಭಾರತದ ವಿವಿಧ ನೃತ್ಯ ಕಲೆಗಳನ್ನು ತಮ್ಮ ಕೈಚಳಕದಿಂದ ಅನಾವರಣಗೊಳಿಸಿದ್ದರು. ದಾಂಡಿಯಾ, ಭರತನಾಟ್ಯ, ಯಕ್ಷಗಾನ, ಮಣಿಪುರಿ ನೃತ್ಯ... ಹೀಗೆ ಹತ್ತಾರು ವಿಧದ ನೃತ್ಯ ಪ್ರಕಾರಗಳನ್ನು ಅರಳಿಸಿ ಪ್ರೇಕ್ಷಕರ ಗಮನ ಸೆಳೆದರು.

**-ಡಾ. ಕೆ. ವಿ. ಸಂತೋಷ್, ಚಿತ್ರದುರ್ಗ**